ಈ ಪರಿ ಕಿರುಚ್‌ಕೊಳ್ಳೋದಾ? ಲೇ ಇವಳೇ, ಮೊದಲು ಅವಳನ್ನ ಬಚ್ಚಲಿಗೆ ಕರ್ಕೊಂಡು ಹೋಗು, ಅಣ್ಣ ಬರುವಷ್ಟರಲ್ಲಿ ದೇವರ ಕೋಣೆ ಸ್ವಚ್ಛ ಮಾಡದಿದ್ರೆ ಪಿರಿಪಿರಿ ಮಾಡ್ತಾನೆ" ಎಂದು ಬೈಯುತ್ತಾ ದೇವರ ಕೋಣೆಯ ಕಡೆ ನಡೆದರು ಗಿರಿಯಣ್ಣ.

"ಅವ ನೋಡಿದ್ರೆ ರಾತ್ರಿ ಹಾಸಿಗೆ ಒದ್ದೆ ಮಾಡ್ತಾನೆ, ಇಳ್ ಲಂಗ ಒದ್ದೆ ಮಾಡ್ತ್ಲ... ಛೇ ಛೇ ಏನ್ ಹಾಳ್ ಅಭ್ಯಾಸಾನೋ, ನನ್ ಮಕ್ಳ್ ಚಿಕ್ಕೋರಿದ್ದಾಗ ಹೀಗಿರ್ಲಿಲ್ಲ... ಎಲ್ಲ ಅವರವರ ಅಮ್ಮಂದಿರ ಚಾಳಿ..." ಎಂದು ಗೊಣಗುತ್ತಾ ಅಜ್ಜಿ, ಮೊಮ್ಮಗ ಗೋಪುವಿನ ಕಡೆ ತಿರುಗಿ, "ಆ ಎಲೆ ಅಡಿಕೆ ಹರಿವಾಣ, ಇಲ್ಲೇ ತಂದು ಕೊಡು ಮರಿ" ಎಂದು ಅಲ್ಲೇ ಕುಂಡೆಯೂರಿತು. ಎಲ್ಲರಿಗಿಂತ ಕಿರಿಯವನಾದ ಗೋಪು ಪರಲೋಕ ವಾಸಿಯಾದ ತನ್ನ ಗಂಡನನ್ನು ಹೋಲುವುದರಿಂದ ಅವನಿಗೆ ಮಾತ್ರ ಅಜ್ಜಿಯಿಂದ 'ಮರಿ' ಎನ್ನುವ ಸಂಬೋಧನೆಯ ಹೆಗ್ಗಳಿಕೆ.

ಅತ್ತೆಯ ಕೊಂಕು ನುಡಿ ಕೇಳಿ, ಪಾರುವಿನ ದೊಡ್ಡಮ್ಮ, ಸರೋಜಾಳಿಗೆ ಅಂಗಳಕ್ಕೆ ಸಾರಿಸುತ್ತಿದ್ದ ಸೆಗಣಿಯನ್ನು ಒಂದಿಷ್ಟು ಅತ್ತೆಯ ಮುಖಕ್ಕೆ ಬಳಿಯಬೇಕೆಂಬ ಮನಸ್ಸಾಯಿತು. ತನ್ನ ಗಂಡ ಪ್ರತೀ ಸಾರಿ ಯಕ್ಷಗಾನ ನೋಡಿ ಬಂದಾಗಲೆಲ್ಲಾ, ರಾತ್ರಿ ಕನಸಲ್ಲಿ ರಕ್ಕಸ ವೇಷ ಕಂಡು ಹಾಸಿಗೆ ಒದ್ದೆಮಾಡುವುದು, ಉಚ್ಚೆ ವಾಸನೆಗೆ ತಾನು ರಾತ್ರಿಯಿಡೀ ನಿದ್ದೆಯಿಲ್ಲದೆ ಒದ್ದಾಡುವುದನ್ನು, ಈ ಮುದುಕಿಯ ಮುಂದೆ ನಿಂತು ಹೇಳುವಂತಿದ್ದರೆ ಎಷ್ಟು ಚೆನ್ನಾಗಿತ್ತು ಎಂದುಕೊಂಡಳು. ಅಂದುಕೊಳ್ಳುವುದು ಅಷ್ಟೆ, ಅತ್ತೆಯ ಅಪ್ಪಣೆಯಿಲ್ಲದೆ ಒಗ್ಗರಣೆಗೆ ಒಂದು ಚಮಚೆ ಸಾಸಿವೆ ಹೆಚ್ಚು ಹಾಕಲು ಧೈರ್ಯವಿಲ್ಲ ಅವಳಿಗೆ. ಬೇಸರದಿಂದ ಅತ್ತೆಯ ಈ ನಿತ್ಯ ಸಹಸ್ರನಾಮಕ್ಕೆ ತನ್ನ ಜೊತೆ ಪಾಲುದಾರಳಾಗಿರುವ ವಾರಗಿತ್ತಿಯ ಕಡೆ ನೋಡಿದಳು. ಅವಳೋ, ಈ ಮುದುಕಿಯದ್ದು ದಿನಾ ಇದ್ದಿದ್ದೆ ಎನ್ನುವಂತೆ ಮುಸುಡಿ ತಿರುವಿ, ಮಗಳನ್ನು ಬಚ್ಚಲ ಕಡೆ ಎಳೆದೊಯ್ದಳು.

ಅಂದು ಬೇಗನೆ ಹಾಸಿಗೆ ಸೇರಿದರೂ, ಮಕ್ಕಳಿಗೆ ನಿದ್ದೆ ಹತ್ತಿರ ಸುಳಿಯಲಿಲ್ಲ. ಅವರೆಲ್ಲರ ನಿದ್ದೆ ಕಸಿದವಳು ಒಬ್ಬಳೆ, ಅವಳು ನಾಗಕ್ಕ!

ಪಾರು ಮತ್ತು ಚೇತು, ನಾಗಕ್ಕ ಕನಸಿನಲ್ಲಿ ಬಂದರೆ ಹಾಸಿಗೆ ಒದ್ದೆಯಾಗಿ, ಬೆಳಗಾದಾಗ ತಮ್ಮ ತಾಯಂದಿರು ಅಜ್ಜಿಯಿಂದ ಮಂಗಳಾರತಿ ಮಾಡಿಸಿಕೊಳ್ಳಬೇಕಾಗುತ್ತದೆ ಎಂಬ ಚಿಂತೆಯಲ್ಲಿ, ನಿದ್ರೆಯಲ್ಲಿ ಹೊರಳಿದಂತೆ ನಟಿಸಿ, ಹಾಸಿಗೆಯಿಂದ ಬರೀ ನೆಲಕ್ಕೆ ಬಂದು ಮಲಗುವುದೆಂದು ಉಪಾಯ ಹೂಡಿದರು. ಚಿಕ್ಕವರಿಬ್ಬರ ಕಥೆ ಹೀಗಾದರೆ, ಮಕ್ಕಳಲ್ಲಿ ಎಲ್ಲರಿಗಿಂತ ದೊಡ್ಡವನಾದ ಸಚ್ಚಿಯ ಕಥೆಯೇ ಬೇರೆ. ನಾಗಕ್ಕ ಬರುತ್ತಾಳೆಂಬ ಸುದ್ದಿ ಕೇಳಿದಾಗಿಂದ ಅವನಿಗೆ ಒಳಗೊಳಗೆ ಪುಳಕ. ದೊಡ್ಡವರ ಒತ್ತಾಯಕ್ಕೆ ಬೇಗ ಮಲಗಿದರೂ, ಅವನಿಗೆ ನಿದ್ದೆ ಬೇಕಿರಲಿಲ್ಲ. ನಿದ್ದೆ ಬಂದರೆ ಕಣ್ತೆರೆದು ಕಾಣಬೇಕೆಂದಿರುವ ಕನಸಿನಲ್ಲಿ ನಾಗಕ್ಕನ ಪ್ರವೇಶವಾಗುವುದೆಂತು? ಸಚ್ಚಿ, ನಾಗಕ್ಕನನ್ನು ನೆನೆಸಿಕೊಂಡು, ತನ್ನ ಚಿಗುರು ಮೀಸೆಯನ್ನೊಮ್ಮೆ ಸವರಿಕೊಂಡ. ಕಳೆದ ಬಾರಿಯ ನೆನಪುಗಳು ಕಾಮನಬಿಲ್ಲಿನಂತೆ ಕಣ್ಣಮುಂದೆ ಬಂದಂತಾಗಿ ಮೈ ಜುಮ್ಮೆಂದಿತು. ಮನದ ಭಾವ ಮುಖದಲ್ಲಿ ಕಂಡಿತೆಂಬ ದಿಗಿಲಲ್ಲಿ, ತಲೆಯ ವರೆಗೆ ಕಂಬಳಿ ಎಳೆದುಕೊಂಡು ಮಗ್ಗುಲಾಗಿ ಮಲಗಿದ. ಬೆಳಗ್ಗೆದ್ದು ತನ್ನ ಮೀಸೆಯನ್ನು ಒಪ್ಪವಾಗಿ ಬಾಚಿಕೊಳ್ಳಬೇಕು ಎಂದುಕೊಂಡವನಿಗೆ ನಾಗಕ್ಕ ಕಿವಿಯಲ್ಲಿ ಕಿಲಕಿಲ ನಕ್ಕಂತಾಯಿತು. ಮತ್ತೆ ಕಾಡಿತು ನೆನಪು. ಅವತ್ತು, ಹಿತ್ತಲಲ್ಲಿ ಉಚ್ಚೆ ಹುಯ್ಯುತ್ತಿದ್ದವನ ಹಿಂದಿನಿಂದ ಬಂದು ಹೆಗಲಿನ ಮೇಲೆ ಕೈ ಹಾಕಿ, "ಚೆನ್ನಾಗಿದ್ದೇಯೇನೋ ಸಚ್ಚಿ" ಎಂದಾಗ ಗಾಬರಿ, ಸಂಕೋಚ ಒಟ್ಟೊಟ್ಟಿಗೆ ಒತ್ತರಿಸಿಕೊಂಡು ಬಂದು, ಮಾಡುತ್ತಿದ್ದ ಕೆಲಸವನ್ನು ಅರ್ಧಕ್ಕೆ ನಿಲ್ಲಿಸಿ ಸರಕ್ಕೆಂದು ಜಿಪ್ ಎಳೆದುಕೊಂಡವನಿಗೆ ಕೆಳಗೆ ಪ್ರಾಣ ಹೋಗುವಷ್ಟು ನೋವಾಗಿದ್ದರೂ, ಹಲ್ಲು ಕಿಸಿಯುತ್ತಾ, "ಹೋ, ನಾಗಕ್ಕ ನೀವಾ?" ಎಂದಿದ್ದ. ಅದಕ್ಕೆ ನಾಗಕ್ಕ ಹುಸಿ ಕೋಪ ನಟಿಸುತ್ತಾ, "ಅಕ್ಕ ಅನ್ನಬೇಡ ಮಾರಾಯ,